ದಿನಾಂಕ 22-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದಃ**

ದಾವಾ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲ. ಮೌಲಾಲಿ ರವರು ಇಸ್ಮಾಯಿಲ್ ಸಾಬ್ ಭಂಡಾರಿ ರವರ ವಿರುದ್ಧ ಸದರಿ ದಾವೆ ಸಲ್ಲಿಸಿರುತ್ತಾರೆ. ವಾದಿಯವರು ಯಾವ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ 1 ನೇ ಪ್ರತಿವಾದಿಯವರು ಖರೀದಿ ತೆಗೆದುಕೊಂಡು ತಾವು ಕಬ್ಜಾ ವಹಿವಾಟಿನಲ್ಲಿ ಇದ್ದಾರೆ. ದಾವಾ ಆಸ್ತಿಯ ಚಕ್ಕುಬಂದಿಗಳು ನನಗೆ ಗೊತ್ತು. ಪೂ- ಪ್ರತಿವಾದಿಯವರ ಆಸ್ತಿ, ಪ- ಅಬ್ದುಲ್ ರೆಹಮಾನ್ ಎಂ ಜೂಡುಕಶ ರವರ ಆಸ್ತಿ, ಉ- ರಸ್ತೆ, ದ- ಮೌಲಾಲಿ ಬಂಕಾಪುರ ರವರ ಮನೆ ಇದೆ. ಸದರಿ ದಾವಾ ಆಸ್ತಿ ಅಳತೆ ನನಗೆ ಗೊತ್ತು. ಪೂ-ಪ- 22 ಚಿಲ್ಲರೆ ಫೂಟ್ ಇರುತ್ತದೆ. ಉ-ದ -100-120 ಫೂಟ್ ಇರುತ್ತದೆ. ಸದರಿ ಅಳತೆಯನ್ನು ಅವರು ಖರೀದಿ ಮಾಡಿರುವ ಬಾಂಡಿನ ಆಧಾರದ ಮೇಲೆ ಹೇಳುತ್ತಿದ್ದೇನೆ. ಸುಮಾರು 5-6 ವರ್ಷಗಳ ಹಿಂದೆ ನಾನು ಸಹ ಅಳತೆ ಮಾಡುವ ಸಮಯದಲ್ಲಿ ಹೋಗಿರುತ್ತೇನೆ. ನನಗೆ ಯಾರೂ ಕರೆದಿರುವುದಿಲ್ಲ, ನಾನೇ ಹೋಗಿರುತ್ತೇನೆ.

2. ನನ್ನ ಮನೆಯ ಸಂಖ್ಯೆ ನನಗೆ ಈಗ ಸರಿಯಾಗಿ ನೆನಪಿಲ್ಲ. ದಾವಾ ಆಸ್ತಿಯ ಖರೀದಿ ಪತ್ರಕ್ಕೆ ನಾನೇನಾದರೂ ಸಹಿ ಮಾಡಿರುತ್ತೇನೆಯೇ ಎಂದರ ಇಲ್ಲ. ಸದರಿ ಪತ್ರಕ್ಕೆ ಗರೀಬಸಾಬ್ ಬಂದಗಿ ರವರು ಸಹಿ ಮಾಡಿರುತ್ತಾರೆ ಹಾಗೂ ಇನ್ನೊಬ್ಬರು ಸಹಿ ಮಾಡಿರುತ್ತಾರೆ, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಇನ್ನೊಬ್ಬರು ಯಾರು ಸಹಿ ಮಾಡಿರುತ್ತಾರೆ ಅವರ ಹೆಸರನ್ನು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ.

ಗರೀಬಸಾಬ್ ಬಂದಗಿ ರವರು ನಿ.ಡಿ–5 ಕ್ಕೆ ಸಹಿ ಮಾಡುವ ಸಮಯದಲ್ಲಿ ನಾನು ನೋಡಿರುವುದಿಲ್ಲ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯವರ ತಂದೆ ಖರೀದಿಗೆ ತೆಗೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತು ಸಹ ವಾದಿಗಳು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಭಂಡಾರಿ ರವರು ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಯ ಉತಾರದಲ್ಲಿ ಯಾರ ಹೆಸರು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಇವತ್ತೂ ಸಹ ದಾವಾ ಆಸ್ತಿಯ ಉತಾರ ವಾದಿಗಳ ಹೆಸರಿನಲ್ಲಿ ಇದ್ದು, ಅವರೇ ದಾವಾ ಆಸ್ತಿಯಲ್ಲಿ ಕಬ್ಜಾ ವಹಿವಾಟಿನಲ್ಲಿ ಇದ್ದರೂ ಸಹ 1 ನೇ ಪ್ರತಿವಾದಿ ಅವರ ಮಾತಿನ ಮೇರೆಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ. ನನಗೆ ದಾವೆಯ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 1 ನೇ ಪ್ರತಿವಾದಿಯವರ ಮಾತಿನ ಮೇರೆಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು

ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್ಲ.

ಸಾಕ್ಷಿದಾರರ ಸಹಿ